**ಕರ್ನಾಟಕ ಸರ್ಕಾರ**
**ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ**

ಸಂ.ಡಿಟಿಇ/02/ಆರ್‌ಇಸಿ/21-22

ಆಯುಕ್ತರ ಕಛೇರಿ,
ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ,
ತಾಂತ್ರಿಕ ಭವನ, ಅರಮನೆ ರಸ್ತೆ
ಬೆಂಗಳೂರು-560 001
ದಿನಾಂಕ: 16-07-2021.

-:: **ಸುತ್ತೋಲೆ** ::-

**ವಿಷಯ:** ಸಂಸ್ಥೆಯ ಖರ್ಚು-ವೆಚ್ಚ ಹಾಗೂ ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗೂ ನಿಗದಿತ ಅವಧಿಯೊಳಗೆ ಗೂಗಲ್ ಫಾರ್ಮ್‌ನಲ್ಲಿ ಭರ್ತಿ ಮಾಡಿ ಸಲ್ಲಿಸುವ ಬಗ್ಗೆ.

-00000000-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಸರ್ಕಾರದ ಆದೇಶದಂತೆ ತಾಂತ್ರಿಕ ಶಿಕ್ಷಣ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸಂಸ್ಥೆಗಳ ಖರ್ಚು-ವೆಚ್ಚಗಳನ್ನು ಕಡ್ಡಾಯವಾಗಿ ಖಜಾನೆ-2 ಮಾದರಿಯಲ್ಲಿಯೆ ಮಾಡಲು ಸೂಚಿಸಲಾಗಿರುವುದರಿಂದ ಆಯಾ ಸಂಸ್ಥೆಯ ಖರ್ಚು-ವೆಚ್ಚಗಳಿಗೆ ಸಂಬಂಧಿಸಿದ **ಖಜಾನೆ ನಮೂನೆ 62-ಬಿ** ಮತ್ತು **ಕೆಟಿಸಿ -25** ಸದರಿ ಸಂಸ್ಥೆಗಳಲ್ಲಿ ಲಭ್ಯವಾಗುತ್ತದೆ. ಆದ ಕಾರಣ ಇನ್ನು ಮುಂದೆ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸಂಸ್ಥೆಗಳ ಖರ್ಚು-ವೆಚ್ಚಗಳನ್ನು ಕಡ್ಡಾಯವಾಗಿ ಪ್ರತಿ ತಿಂಗಳ ಖರ್ಚು-ವೆಚ್ಚಗಳ ಅಂಕಿ-ಅಂಶಗಳನ್ನು ಆಯಾ ಸಂಸ್ಥೆಯಲ್ಲಿನ ಲೆಕ್ಕ-ಪತ್ರಗಳೊಂದಿಗೆ ತಾಳೆ ಮಾಡಿ ಹೊಂದಾಣಿಕೆಯಾದಲ್ಲಿ ನಿಗಧಿತ ಅವಧಿಯೊಳಗೆ ಆಯುಕ್ತರ ಕಛೇರಿಗೆ ಸಲ್ಲಿಸುವುದು. ತಾಳೆಯಾಗದಿದ್ದಲ್ಲಿ ಸಂಬಂಧಪಟ್ಟ ಸ್ಥಳೀಯ ಖಜಾನೆಯೊಂದಿಗೆ ಸಮನ್ವಯಿಸಿ ಲೆಕ್ಕಗಳನ್ನು ತಾಳೆಮಾಡಿ, ಹೊಂದಾಣಿಸಿ ಸಂಸ್ಥೆಯ ಬಟವಾಡೆ ಅಧಿಕಾರಿಯವರಿಂದ ಧೃಢೀಕರಿಸಿ ಆಯುಕ್ತರ ಕಛೇರಿಗೆ **ಪ್ರತಿ ತಿಂಗಳ 10ನೇ ತಾರೀಖಿನೊಳಗೆ** ತಮ್ಮ ಸಂಸ್ಥೆಗಳಿಗೆ ಸಂಬಂಧಿಸಿದ ಆಯಾ ತಿಂಗಳ ಧೃಢೀಕೃತ **ಖಜಾನೆ ನಮೂನೆ 62-ಬಿ** ಮತ್ತು **ಕೆಟಿಸಿ - 25** ಗಳೊಂದಿಗೆ ಲೆಕ್ಕ ಸಮನ್ವಯ ತಃಖ್ತೆಗಳನ್ನು ಸಲ್ಲಿಸಲು ಸೂಚಿಸಿದೆ. ತಡವಾದಲ್ಲಿ ಮುಂದಿನ ಆಗು-ಹೋಗುಗಳಿಗೆ ಸಂಸ್ಥೆಯ ಪ್ರಾಂಶುಪಾಲರನ್ನೆ ನೇರ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಸೂಚಿಸಿದೆ.

**ಹಾಗೂ ಎಲ್ಲಾ ಸಂಸ್ಥೆಗಳಲ್ಲೂ ಆಯಾ ಮಾಹೆಗಳಲ್ಲಿ ಲೆಕ್ಕ ಸಮನ್ವಯ ಮಾಡಿರುವ ಮಾಹಿತಿಯನ್ನು ಈ ಕೆಳಕಂಡ ಗೂಗಲ್ ಫಾರ್ಮ್ ವಿಳಾಸ: https://forms.gle/tQEqKfJfcNmNEcUH7 ನಲ್ಲಿಯೂ ಸಹಾ ಭರ್ತಿ ಮಾಡಿ ಅತೀ-ಜರೂರಾಗಿ ಕಳುಹಿಸಲು ತಿಳಿಸಿದೆ.**

**ಲೆಕ್ಕಾಧಿಕಾರಿಗಳು**
16/7

ಇವರಿಗೆ;
ರಾಜ್ಯದ ಎಲ್ಲಾ ಸರ್ಕಾರಿ ಇಂಜಿನಿಯರಿಂಗ್/ಪಾಲಿಟೆಕ್ನಿಕ್ ಮತ್ತು ಕಿರಿಯ ತಾಂತ್ರಿಕ ಶಾಲೆಗಳ ಪ್ರಾಚಾರ್ಯರಿಗೆ - ಸೂಕ್ತ ಕ್ರಮಕ್ಕಾಗಿ.

**ಪ್ರತಿ:**

1. ಇ-ಆಡಳಿತ ವಿಭಾಗ, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ತಾಂತ್ರಿಕ ಭವನ, ಬೆಂಗಳೂರು **(ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)**
2. ಕಛೇರಿ ಪ್ರತಿ.